ಹೀಗೆ ನಮ್ಮ ಪೌರಾಣಿಕ ಕಥೆಗಳನ್ನು ಕೆದಕುತ್ತಾ ಹೋದರೆ ಇನ್ನೂ ಕೆಲವು ಸ್ವಯಂವರ ಪ್ರಸಂಗಗಳು ನಮಗೆ ಎದುರಾಗುತ್ತವೆ. ಉದಾಹರಣೆಗೆ ಅಂಬೆ, ಅಂಬಿಕೆ, ಅಂಬಾಲಿಕೆಯರ ಸ್ವಯಂವರ ಪ್ರಸಂಗ. ಅದರಲ್ಲೂ ಅಂಬೆಯದಂತೂ ಬಿಡಿ, ಅದೊಂದು ಹೃದಯ ವಿದ್ರಾವಕ ದುರಂತ ಪ್ರೇಮ ಪ್ರಕರಣ. ಆದರೆ, ಇವು ಯಾವವೂ ಹೆಣ್ಣಿನ ಆಯ್ಕೆಯ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ನಿರೂಪಿಸುವ ನಿಜಾರ್ಥದ ಸ್ವಯಂವರಗಳಲ್ಲವಾದ್ದರಿಂದ ಈಗ ಆಧುನಿಕ ಕಾಲಕ್ಕೆ ಬರೋಣ. ಏಕೆಂದರೆ, ನಿಜವಾದ ಸ್ವಯಂವರಗಳು ನಮ್ಮ ದೇಶದಲ್ಲಿ ನಡೆಯುತ್ತಿರುವುದು ತೀರಾ ಇತ್ತೀಚೆಗಷ್ಟೇ, ಅದೂ ಕಳೆದ ಕೆಲವು ದಶಕಗಳಿಂದ ಮಾತ್ರ.

ಇದಕ್ಕೆ ಬಹು ಮುಖ್ಯ ಕಾರಣ, ಸ್ವಾತಂತ್ರ್ಯಾನಂತರದಲ್ಲಿ ಪ್ರಜಾಪ್ರಭುತ್ವ ಗಣರಾಜ್ಯವಾದ ಭಾರತದಲ್ಲಿ ಕ್ಷಿಪ್ರಗತಿಯಲ್ಲಿ ಆಗುತ್ತಿರುವ ಸಾಮಾಜಿಕ ಬದಲಾವಣೆಗಳು ಎಂಬುದು ಸ್ವಯಂವೇದ್ಯ. ಹಿಂದೆ ತನಗೆ ಬೇಕಾದ ಹೆಣ್ಣನ್ನು ಪತ್ನಿಯಾಗಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಗಂಡಿಗೆ ಮಾತ್ರ ಸೀಮಿತವಾಗಿತ್ತು. ಇದನ್ನು ಹೆಸರಾಂತ ಹನಿಗವಿ ಗೆಳೆಯ ಎಚ್. ಡುಂಡಿರಾಜ ಹೀಗೆ ಸೊಗಸಾಗಿ ವಿಡಂಬಿಸಿದ್ದಾರೆ:

## ಸ್ವಯಂ

ಹೆಣ್ಣು<br>
ತನ್ನ ಗಂಡನನ್ನು<br>
ತಾನೇ ಆರಿಸುವುದು<br>
ಸ್ವಯಂವರ;<br>
ಗಂಡು ಹಾಗೆ<br>
ಮಾಡಿದರೆ ಅದು<br>
ಸ್ವಯಂworry

ಇಂದು ಬಹುಮಟ್ಟಿಗೆ ನಮ್ಮ ಸಮಾಜದ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಗಳ ಹೆಣ್ಣುಮಕ್ಕಳು ವಿದ್ಯಾವಂತರಾಗುತ್ತಿದ್ದಾರೆ, ಉದ್ಯೋಗಸ್ಥರಾಗುತ್ತಿದ್ದಾರೆ, ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ. ಹೀಗಾಗಿ, ನಮ್ಮಲ್ಲಿನ ವೈವಾಹಿಕ ವ್ಯವಸ್ಥೆಯೂ ಕ್ರಮೇಣ ಬದಲಾಗುತ್ತಿದೆ. ಹೆಣ್ಣು ತನಗೆ ಅನುರೂಪನಾದ ವರನನ್ನು ತಾನೇ ಸ್ವಇಚ್ಛೆಯಿಂದ ಆಯ್ಕೆ ಮಾಡಿಕೊಳ್ಳುವ ಹಂತಕ್ಕೆ ಇಂದು ಏರಿದ್ದಾಳೆ. ಹಿಂದೆ ಕ್ಷತ್ರಿಯ ರಾಜಕನ್ಯೆಯರಿಗಷ್ಟೇ ಸೀಮಿತವಾಗಿದ್ದ ಸ್ವಯಂವರ ವ್ಯವಸ್ಥೆ ಇಂದು ಸಮಾಜದ ಎಲ್ಲ ಜಾತಿಯ, ಸ್ತರದ ಹೆಣ್ಣುಮಕ್ಕಳಿಗೂ ವಿಸ್ತರಿಸಿದೆ. ಇದಕ್ಕೆ ಉದಾಹರಣೆಯಾಗಿ, ಇಂದು ದೇಶದ ಎಲ್ಲೆಡೆ ನಡೆಯುತ್ತಿರುವ, ಆಧುನಿಕ ಸ್ವಯಂವರಗಳೆಂದು ಕರೆಯಬಹುದಾದ, 'ವಧು ವರಾನ್ವೇಷಣೆಯ ಸಮಾವೇಶ'ಗಳನ್ನು ನೋಡಬಹುದು.

ಹಿಂದೆ ವಯಸ್ಕ ಹೆಣ್ಣುಮಗಳಿಗೆ ತಕ್ಕ ಗಂಡನ್ನು ಹುಡುಕುವುದೆಂದರೆ ಕನ್ಯಾಪಿತೃವಿಗೆ (ಆ ಬಡಪಾಯಿಯನ್ನು 'ಕಪಿ' ಎಂದು ಗೇಲಿ ಮಾಡಲಾಗುತ್ತಿತ್ತು) ಅದೊಂದು ದುಸ್ಸಾಹಸವಾಗಿತ್ತು. ಜೊತೆಗೆ ವರದಕ್ಷಿಣೆ, ವರೋಪಚಾರ, ಅದ್ದೂರಿಯ ಮದುವೆ ಇತ್ಯಾದಿ ಪಿಡುಗುಗಳೂ ವ್ಯಾಪಕವಾಗಿದ್ದವು. ಹೆತ್ತವರಿಗೆ ಹೆಣ್ಣುಮಕ್ಕಳು ಹೊರಲಾಗದ ಹೊರೆ ಎಂಬ ಪರಿಸ್ಥಿತಿಯಿತ್ತು. ಆದರೆ, ಇಂದು ಕಾಲ ಬಹುಮಟ್ಟಿಗೆ ಬದಲಾಗಿದೆ. ಇದು ಹೆಣ್ಣಿನ 'ವಿಮೋಚನೆ ಮತ್ತು ಅಭ್ಯುದಯದ ಪರ್ವ'. ಹಾಗಾಗಿ, ಅಂದು ಗಂಡಿದ್ದ ಸ್ಥಾನದಲ್ಲಿ ಇಂದು ಹೆಣ್ಣಿದ್ದಾಳೆ ಎಂದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ವಯಸ್ಕ ಗಂಡಿಗೆ ತಕ್ಕ ಹೆಣ್ಣು ದೊರೆಯುವುದು ಇಂದು ದುಸ್ತರ, ದುರ್ಲಭವಾಗಿದೆ. ಹೆಣ್ಣಿನ ಮತ್ತು ಹೆಣ್ಣಿನ ಕಡೆಯವರ ಎಲ್ಲ ಬೇಡಿಕೆ, ನಿಯಮ ನಿಬಂಧನೆಗಳನ್ನೂ ಪೂರೈಸಿ, ಹೆಣ್ಣಿನ ಕೈಹಿಡಿಯಬೇಕಾದ ಕಡು ಕಷ್ಟಕಾಲ ಈಗ ಗಂಡಿಗೆ ಬಂದೊದಗಿದೆ.

ಇಷ್ಟಾಗಿ, ಮದುವೆಯಾದರೆ ಮುಗಿಯಿತು, 'ಕಲ್ಯಾಣಂ ಮಂಗಳಂ ಶುಭಂ' ಎನ್ನುವಂತಿಲ್ಲ. ಮದುವೆ ಇಂದು ಒಂದು ತಾತ್ಕಾಲಿಕ ಒಪ್ಪಂದ ಮಾತ್ರ, ಹಿಂದಿನ ಕಾಲದಂತೆ ಅದೊಂದು ಶಾಶ್ವತ ಬಂಧ, ಬಂಧನವಲ್ಲ. ದಾಂಪತ್ಯ ಜೀವನದ ಹೊಂದಾಣಿಕೆಯ ಪ್ರಯೋಗ ಮತ್ತು ಪರೀಕ್ಷೆಗೆ ಅದೊಂದು ಅನುಮತಿ ಪತ್ರವಷ್ಟೇ. ಹೊಂದಾಣಿಕೆ ಸಾಧ್ಯವಿಲ್ಲ ಅನ್ನಿಸಿದ ಮರುಕ್ಷಣವೇ ಆ ಮದುವೆ ಮುರಿದುಬಿತ್ತು ಅಂತಲೇ ಅರ್ಥ. ಈ ಬಗ್ಗೆ 'ಅಭಿನಂದನೆ' ಎಂಬ ನನ್ನ ವಿಡಂಬನಾತ್ಮಕ ಕವಿತೆಯಲ್ಲಿ